**ರಾಜ್ಯ ಶೈಕ್ಷಣಿಕ ಸಂಶೋಧನ ಹಾಗೂ ಪ್ರಶಿಕ್ಷಣ ಪರಿಷದ್, ಮಹಾರಾಷ್ಟ್ರ, ಪುಣೆ**

**ನಿಪುಣ ಭಾರತ - ಅಧ್ಯಯನ ಅಭ್ಯಾಸ ಸರ್ವೇಕ್ಷಣ**

**ವಿಷಯ - ಪ್ರಥಮ ಭಾಷೆ (ಕನ್ನಡ) : ಎರಡನೆಯ ತರಗತಿ**

---

**ಅಧ್ಯಯನ ನಿಷ್ಪತ್ತಿ ಕ್ರ. ೧ :** ತಿಳಿದಿರುವ ಹಾಡುಗಳು ಮತ್ತು ಕವಿತೆಗಳಿಂದ ಪ್ರಾಸಬದ್ಧ ಪದಗಳನ್ನು ಗುರುತಿಸುತ್ತಾರೆ ಮತ್ತು ಸ್ವಂತ ಪದಗಳನ್ನು ರಚಿಸುತ್ತಾರೆ.

**ಶಿಕ್ಷಕರಿಗೆ ಸೂಚನೆಗಳು :**

- ಕವಿತೆಯನ್ನು ಸ್ವರ ಮತ್ತು ಲಯದಲ್ಲಿ ಶಿಕ್ಷಕರು ಮಕ್ಕಳಿಗೆ ಹಾಡಿ ತೋರಿಸಬೇಕು.
- ಕವಿತೆಯನ್ನು ಹಾಡುವ ಮೊದಲು ಮಕ್ಕಳಿಗೆ ಕವಿತೆಯನ್ನು ಎಚ್ಚರಿಕೆಯಿಂದ ಆಲಿಸಲು ಮತ್ತು ಅದರ ಬಗ್ಗೆ ಪ್ರಶ್ನೆಗಳನ್ನು ಕೇಳಲು ಸೂಚಿಸಬೇಕು.
- ಕವಿತೆಯನ್ನು ಪ್ರತಿ ಮಗುವಿಗೆ ಹಾಡಿ ತೋರಿಸಿ ನಂತರ ಕವಿತೆಯ ಆಧಾರದ ಮೇಲೆ ಮುಂದಿನ ಪ್ರಶ್ನೆಗಳನ್ನು ಕೇಳಿ.
- ಒಂದು ಪ್ರಶ್ನೆಗೆ ವಿದ್ಯಾರ್ಥಿಗೆ ಉತ್ತರಿಸಲು ೧೦ ಸೆಕೆಂಡುಗಳ ಸಮಯ ಕೊಡಬೇಕು. ಒಂದು ವೇಳೆ ವಿದ್ಯಾರ್ಥಿಯು ೧೦ ಸೆಕೆಂಡುಗಳಲ್ಲಿ ಪ್ರಶ್ನೆಯ ಉತ್ತರ ಕೊಡದಿದ್ದಲ್ಲಿ ಆತನಿಗೆ ಮುಂದಿನ ಪ್ರಶ್ನೆಗಳನ್ನು ಕೇಳಿರಿ.

**ಕವಿತೆ ವಾಚನ :**

ಅರಣ್ಯ ನಾಡಿನ ಸಂಪತ್ತು,
ಅದಕೆ ತಂದರೆ ಆಪತ್ತು,
ದೇಶಕೆ ತಪ್ಪದು ವಿಪತ್ತು.
ಇದುವೆ ಸತ್ಯ ಯಾವತ್ತು.
ಕಡಿಮೆಯಾಗುವುದು ಮಳೆ,
ಬಡವಾಗುವುದು ಹೊಳೆ.

| ಪ್ರಶ್ನೆ | ಉತ್ತರ |
|---|---|
| ೧) ನಾಡಿನ ಸಂಪತ್ತು ಯಾವುದಕ್ಕೆ ಹೇಳಲಾಗಿದೆ ? | ಅರಣ್ಯಕ್ಕೆ |
| ೨) ಕೆಳಗಿನ ಯಾವ ಜೋಡಿ ಪದಗಳು ಕೊನೆಗೆ ಒಂದೇ ಅಕ್ಷರವನ್ನು ಹೊಂದಿದೆ ? ಮಳೆ-ಹೊಳೆ, ಅದಕೆ-ತಪ್ಪದು, ದೇಶಕೆ-ಆಪತ್ತು. | ಮಳೆ-ಹೊಳೆ |
| ೩) ಸಂಪತ್ತು-ಆಪತ್ತು ಹಾಗೆ ವಿಪತ್ತು-.................. | ಯಾವತ್ತು |
| ೪) ಕೊನೆಯ ಅಕ್ಷರ ಒಂದೇ ಆಗಿರುವ ಜೋಡಿಯನ್ನು ಹೆಸರಿಸಿರಿ. | ಯೋಗ್ಯ ಶಬ್ದ ಒಪ್ಪಿಕೊಳ್ಳಿ |

**ಮೌಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ಕವಿತೆಯನ್ನು ಕೇಳಿದ ನಂತರ ೪ ರಿಂದ ೫ ಪ್ರಶ್ನೆಗಳಿಗೆ ಯೋಗ್ಯ ಮತ್ತು ಸಂಪೂರ್ಣ ಉತ್ತರ ಕೊಡುತ್ತಾನೆ/ ಕೊಡುತ್ತಾಳೆ. | ೩ |
| ಕವಿತೆಯನ್ನು ಕೇಳಿದ ನಂತರ ೨ ರಿಂದ ೩ ಪ್ರಶ್ನೆಗಳಿಗೆ ಯೋಗ್ಯ ಮತ್ತು ಸಂಪೂರ್ಣ ಉತ್ತರ ಕೊಡುತ್ತಾನೆ/ ಕೊಡುತ್ತಾಳೆ. | ೨ |
| ಕವಿತೆಯನ್ನು ಕೇಳಿದ ನಂತರ ಒಂದೇ ಒಂದು ಪ್ರಶ್ನೆಗೆ ಸರಿಯಾಗಿ ಮತ್ತು ಸಂಪೂರ್ಣವಾಗಿ ಉತ್ತರಿಸುತ್ತಾನೆ/ ಉತ್ತರಿಸುತ್ತಾಳೆ. | ೧ |
| ಕವಿತೆಯನ್ನು ಕೇಳಿದ ನಂತರ ಪ್ರಶ್ನೆಗಳಿಗೆ ಉತ್ತರಿಸುವಾಗ ಅವನು/ಅವಳು ಹಿಂಜರಿಯುತ್ತಾರೆ ಮತ್ತು ಯಾವುದೇ ಪ್ರಶ್ನೆಗೆ ಯೋಗ್ಯ ಉತ್ತರವನ್ನುಕೊಡುವುದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೨ :** ಕಥೆಗಳು ಮತ್ತು ಕವಿತೆಗಳನ್ನು ಓದುವಾಗ, ಅಕ್ಷರದ ಚಿಹ್ನೆಗಳು ಮತ್ತು ಅವುಗಳ ಧ್ವನಿ ಇವುಗಳ ಬಗ್ಗೆ ತಿಳಿದು ಬರೆಯುವಾಗ ಅವುಗಳನ್ನು ಉಪಯೋಗಿಸುತ್ತೇವೆ.

**ಶಿಕ್ಷಕರಿಗೆ ಸೂಚನೆಗಳು :**

- ಪ್ರತಿ ಪದವನ್ನು ಎರಡು ಬಾರಿ ಎಚ್ಚರಿಕೆಯಿಂದ ಉಚ್ಚರಿಸಿ.
- ಮಗು ೧೦ ಸೆಕೆಂಡುಗಳಿಗಿಂತ ಹೆಚ್ಚು ಸಮಯ ಒಂದೇ ಪದದಲ್ಲಿ ವಿರಾಮಗೊಳಿಸಿದರೆ ಅಥವಾ ಉತ್ತರಿಸದಿದ್ದರೆ ಮುಂದಿನ ಶಬ್ದ (ಪದಗಳನ್ನು) ಹೇಳಿರಿ.

**ಈಗ ನಾನು ನಿಮಗೆ ಕೆಲವು ಪದಗಳನ್ನು ಹೇಳುತ್ತೇನೆ ಮತ್ತು ಅದರ ಮೊದಲ ಅಕ್ಷರ/ಧ್ವನಿಯನ್ನು ನೀವು ನನಗೆ ಹೇಳಬೇಕು.**

| ಕ್ರ.ಸಂ. | ಶಬ್ದ | ಮೊದಲ ಅಕ್ಷರ |
|---|---|---|
| ೧) | ರೀಮಾ | (ರ/ರಿ) |
| ೨) | ಬ್ರೆಡ್ | (ಬ್ರೆ/ಬ್ರಾ) |
| ೩) | ಮಳೆ | (ಮಾ/ಮ) |

**ಈಗ ನಾನು ನಿಮಗೆ ಕೆಲವು ಶಬ್ದಗಳನ್ನು ಹೇಳುತ್ತೇನೆ ಮತ್ತು ಅದರ ಕೊನೆಯ ಅಕ್ಷರ/ಧ್ವನಿಯನ್ನು ನೀವು ಹೇಳಬೇಕು.**

| ಕ್ರ.ಸಂ. | ಶಬ್ದ | ಮೊದಲ ಅಕ್ಷರ |
|---|---|---|
| ೧) | ಊಟ | (ಟ) |
| ೨) | ಅಂಗಡಿ | (ಡಿ) |
| ೩) | ಚೇತನ | (ನ) |

**ಮೌಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ಕೊಟ್ಟಿರುವ ಶಬ್ದದಲ್ಲಿ ೫ ರಿಂದ ೬ ಶಬ್ದಗಳ ಕೊನೆಯ ಮತ್ತು ಮೊದಲ ಶಬ್ದಗಳನ್ನು ಗುರುತಿಸುತ್ತಾರೆ. | ೩ |
| ಕೊಟ್ಟಿರುವ ಶಬ್ದದಲ್ಲಿ ೩ ರಿಂದ ೪ ಶಬ್ದಗಳ ಕೊನೆಯ ಮತ್ತು ಮೊದಲ ಶಬ್ದಗಳನ್ನು ಗುರುತಿಸುತ್ತಾರೆ. | ೨ |
| ಕೊಟ್ಟಿರುವ ಶಬ್ದದಲ್ಲಿ ೨ ರಿಂದ ೩ ಶಬ್ದಗಳ ಕೊನೆಯ ಮತ್ತು ಮೊದಲ ಶಬ್ದಗಳನ್ನು ಗುರುತಿಸುತ್ತಾರೆ. | ೧ |
| ಶಬ್ದದ ಕೊನೆಯ ಅಥವಾ ಮೊದಲ ಧ್ವನಿಯನ್ನು ಗುರುತಿಸುವುದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೩ :** ಪುಸ್ತಕದಲ್ಲಿ ಕೊಟ್ಟಿರುವ ಪರಿಚ್ಛೇದದ ಅರ್ಥವನ್ನು ತಿಳಿದುಕೊಳ್ಳಲು ಪುಸ್ತಕದ ಪುಟಗಳನ್ನು ಹಿಂದೆ/ಮುಂದೆ ತಿರುಗಿಸಿ ತಿಳಿದುಕೊಳ್ಳಲು ಪ್ರಯತ್ನಿಸುವರು, ಅವರ ಅಭಿಪ್ರಾಯ ವ್ಯಕ್ತ ಮಾಡುವರು.

**ಶಿಕ್ಷಕರಿಗೆ ಸೂಚನೆಗಳು :**

- ಶಿಕ್ಷಕರು ಮಕ್ಕಳಿಗೆ ಪರಿಚ್ಛೇದವಿರುವ ಕಾರ್ಡಶೀಟ ಹಾಳೆಯನ್ನು ಓದಲು ಕೊಡಬೇಕು.
- ಮಕ್ಕಳಿಗೆ ಪರಿಚ್ಛೇದ ಎಚ್ಚರಿಕೆಯಿಂದ ಓದಲು ಹೇಳಿ ಮತ್ತು ಪರಿಚ್ಛೇದ ಓದಿದ ನಂತರ ಪ್ರಶ್ನೆ ಕೇಳಲಾಗುತ್ತದೆ ಎಂದು ಸೂಚಿಸಿರಿ.
- ಒಂದು ಶಬ್ದವನ್ನು ಓದಲು ಮಗುವಿಗೆ ೫ ಸೆಕೆಂಡುಗಳಿಗಿಂತ ಹೆಚ್ಚು ಸಮಯ ತೆಗೆದುಕೊಂಡರೆ, ನಂತರ ಮುಂದಿನ ಶಬ್ದ ಓದಲು ಹೇಳಿರಿ.

**ಚಿಹ್ನೆಯ ಗುರುತು :**

೧) ಯಾವುದೇ ಶಬ್ದವನ್ನು ಓದದಿದ್ದರೆ ಅಥವಾ ತಪ್ಪಾಗಿ ಓದಿದರೆ ಅದನ್ನು (/) ಎಂದು ಗುರುತಿಸಿರಿ.

೨) ಸರಿಯಾಗಿ ಶಬ್ದವನ್ನು ಓದಿದ ನಂತರ ಅಥವಾ ತಾನೇ ಸರಿಪಡಿಸಿಕೊಂಡು ಓದಿದ ಶಬ್ದಗಳಿಗೆ (∅) ಈ ಚಿಹ್ನೆಯೊಂದಿಗೆ ಗುರುತಿಸಿರಿ.

ಓದಲು ತೆಗೆದುಕೊಂಡ ಸಮಯ ......................../೬೦

ಮಗು ೬೦ ಸೆಕೆಂಡುಗಳಲ್ಲಿ ಓದಿದ ಶಬ್ದ ................./೨೫

**ಪರಿಚ್ಛೇದ ಓದುವುದು :**

ಬಸ್ಸು ಸಪ್ತ ಸಾಗರದ ನಿಲ್ದಾಣಕ್ಕೆ ಬಂದು ನಿಂತಿತು. ಬಸ್ಸಿನಿಂದ ಇಳಿದ ಜನರು ಪಕ್ಕದಲ್ಲೇ ಇದ್ದ ಆಟಿಕೆಗಳ ಅಂಗಡಿಗೆ ಹೋದರು. ಡಬ್ಬದ ರೀತಿಯಲ್ಲಿ ಮುಚ್ಚಳ ಇರುವ ಆಟಿಕೆಗಳನ್ನು ಕೊಂಡರು. ಈ ಅಂಗಡಿಯ ಪಕ್ಕ ಇದ್ದ ಹೊಟೇಲಿನಲ್ಲಿ ನಿಪ್ಪಟ್ಟು, ಚಕ್ಕುಲಿ ಮುಂತಾದ ತಿಂಡಿಗಳನ್ನು ತಿಂದರು. ಇದರಿಂದ ಜನರ ಜೊತೆಗಿನ ಮಕ್ಕಳು ತುಂಬ ಖುಷಿಪಟ್ಟರು.

**ಮೌಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ನಿಗದಿತ ಸಮಯದಲ್ಲಿ ಸ್ಪಷ್ಟ ಉಚ್ಚಾರ, ಸರಿಯಾದ ಗತಿ ಮತ್ತು ಏರಿಳಿತಗಳೊಂದಿಗೆ ವಿರಾಮ ಚಿಹ್ನೆಯೊಂದಿಗೆ ೧೪ ರಿಂದ ೨೫ ಶಬ್ದಗಳ ಓದುವಿಕೆ. | ೩ |
| ನಿಗದಿತ ಸಮಯದಲ್ಲಿ ಸ್ಪಷ್ಟ ಉಚ್ಚಾರ, ಸರಿಯಾದ ಗತಿ ಮತ್ತು ಸ್ವಯಂ ಸುಧಾರಣೆ ಮಾಡಿಕೊಂಡು ೧೪ ರಿಂದ ೧೦ ಶಬ್ದಗಳನ್ನು ಓದುವುದು. | ೨ |
| ನಿಗದಿತ ಸಮಯದಲ್ಲಿ ಶಬ್ದ ಅಥವಾ ಅಕ್ಷರಗಳನ್ನು ತೊದಲುವಿಕೆಯಿಂದ ೯ ರಿಂದ ೫ ಶಬ್ದಗಳನ್ನು ಓದುವುದು. | ೧ |
| ಒಂದೇ ಒಂದು ಶಬ್ದವನ್ನು ಸರಿಯಾಗಿ ಓದುವುದಿಲ್ಲ ಅಥವಾ ಏನನ್ನೂ ಹೇಳುವುದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೪ :** ಚಿತ್ರದ ಜೊತೆಗೆ ಕೊಟ್ಟಿರುವ ಪದ್ಯದೊಂದಿಗೆ ಪರಸ್ಪರ ಪದ್ಯದ ಅರ್ಥವನ್ನು ಮಾಡಿಕೊಳ್ಳುವುದು.

**ಶಿಕ್ಷಕರಿಗೆ ಸೂಚನೆಗಳು :**

- ನೋಟ್‌ಬುಕ್‌ನಲ್ಲಿ ಚಿತ್ರಗಳ ಬದಲಿಗೆ ಸೂಕ್ತವಾದ ಶಬ್ದಗಳನ್ನು ಬಳಸಿ ವಾಕ್ಯಗಳನ್ನು ಬರೆಯಿರಿ.

೧)  ಮುಚ್ಚಿ

೨)  ಸುಂದರವಾಗಿದೆ.

೩)  ಇದೆ.

**ಮೌಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ಮೂರು ವಾಕ್ಯಗಳನ್ನು ಸರಿಯಾಗಿ ಬರೆಯುತ್ತಾರೆ. | ೩ |
| ಎರಡು ವಾಕ್ಯಗಳನ್ನು ಸರಿಯಾಗಿ ಬರೆಯುತ್ತಾರೆ. | ೨ |
| ಒಂದೇ ವಾಕ್ಯವನ್ನು ಸರಿಯಾಗಿ ಬರೆಯುತ್ತಾರೆ. | ೧ |
| ಪ್ರತಿಕ್ರಿಯಿಸುವುದಿಲ್ಲ/ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೫ :** ಸುತ್ತಮುತ್ತಲಿನ ಪ್ರಾಣಿಗಳು ಮತ್ತು ಪಕ್ಷಿಗಳ ಬಗ್ಗೆ ಮಾತನಾಡುತ್ತಾರೆ ಮತ್ತು ಮನೆ, ಶಾಲೆಯ ಸುತ್ತಮುತ್ತ ಸಾಂಪ್ರದಾಯಿಕ ರೀತಿಯಲ್ಲಿ ಸ್ಥಳೀಯ ಭಾಷೆಯಲ್ಲಿ ಬರೆಯಲು ಪ್ರಯತ್ನಿಸುತ್ತಾರೆ.

**ಶಿಕ್ಷಕರಿಗೆ ಸೂಚನೆಗಳು :**

- ಶಿಕ್ಷಕರು ಮಕ್ಕಳಿಗೆ ಚಿತ್ರದ ಕಾರ್ಡ ಶೀಟ ಹಾಳೆಯನ್ನು ಅವರ ಕೈಯಲ್ಲಿ ಕೊಡಬೇಕು. ಅದನ್ನು ಎಚ್ಚರಿಕೆಯಿಂದ ಗಮನಿಸಲು ಹೇಳಿ.
- ಚಿತ್ರವನ್ನು ನೋಡಲು ಮತ್ತು ವಾಕ್ಯನು ಹೊಂದಿಸಲು ಮಗುವಿಗೆ ಗರಿಷ್ಠ ಒಂದು ನಿಮಿಷ ಅವಕಾಶ ಕೊಡಿರಿ.
- ಮೇಲಿನ ಪ್ರಶ್ನೆಗಳಲ್ಲಿ ಆಡು ಭಾಷೆಯಲ್ಲಿಯ ಶಬ್ದಗಳನ್ನು ತೆಗೆದುಕೊಳ್ಳಬೇಕು. ಹೃಸ್ವ-ದೀರ್ಘಗಳ ವಿಚಾರ ಮಾಡಬೇಡಿರಿ.
- ಮಗು ಕೇವಲ ಚಿತ್ರಗಳನ್ನು ಮಾತ್ರ ಗುರುತಿಸಿದರೆ ಅದರ ಹೆಸರನ್ನು ಬರೆಯಲು ಸಾಧ್ಯವಾಗದಿದ್ದರೆ ಅವುಗಳ ನೋಂದ ಮಾಡಿ ಇಡಬೇಕು. ಚಿತ್ರ ವೀಕ್ಷಿಸಲು ಪ್ರತಿ ಮಗುವಿಗೆ ೨೦ ಸೆಕೆಂಡುಗಳನ್ನು ಕೊಡಬೇಕು.

| | | |
|---|---|---|
| **ಸಂಬಂಧಿತ ಚಿತ್ರ** | ಐದು ಪ್ರಾಣಿಗಳ ಚಿತ್ರ - ಉದಾ. |  |
| | ಐದು ಪಕ್ಷಿಗಳ ಚಿತ್ರ - ಉದಾ. | |

**ಮೌಲ್ಯಮಾಪನ ರುಬ್ರಿಕ್ :**

| **ವಿವರಣೆ** | **ಶ್ರೇಣಿ** |
|---|---|
| ಪ್ರಾಣಿಗಳ ಅಥವಾ ಪಕ್ಷಿಗಳ ೫ ರಿಂದ ೬ ಹೆಸರುಗಳನ್ನು ಬರೆಯುತ್ತಾರೆ. | ೩ |
| ಪ್ರಾಣಿಗಳ ಅಥವಾ ಪಕ್ಷಿಗಳ ೩ ರಿಂದ ೪ ಹೆಸರುಗಳನ್ನು ಬರೆಯುತ್ತಾರೆ. | ೨ |
| ಪ್ರಾಣಿಗಳ ಅಥವಾ ಪಕ್ಷಿಗಳ ೧ ರಿಂದ ೨ ಹೆಸರುಗಳನ್ನು ಬರೆಯುತ್ತಾರೆ. | ೧ |
| ಪ್ರತಿಕ್ರಿಯಿಸುವುದಿಲ್ಲ/ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ. | ೦ |

❑❑❑